## ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022

ತರಗತಿ : 6ನೇ ತರಗತಿ ವಿಷಯ : ಪರಿಸರ ಅಧ್ಯಯನ

| ಕ್ರ ಸಂ | ತಿಂಗಳು/ ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ಫೆಬ್ರವರಿ ಮೊದಲನೇ ವಾರ<br><br>ಅಧ್ಯಾಯ:13–ಕಾಂತಗಳೊಂದಿಗೆ ಆಟ | 1.ಕಾಂತಗಳ ಅರ್ಥ,ನೈಸರ್ಗಿಕ ಕಾಂತದ ಆವಿಷ್ಕಾರ,ಕೃತಕ ಕಾಂತಗಳು ಹಾಗೂ ಕಾಂತದ ವಿವಿಧ ಆಕಾರಗಳ ಬಗ್ಗೆ ಅರಿಯುವರು.<br><br>2.ಕಾಂತೀಯ ಹಾಗೂ ಅಕಾಂತೀಯ ವಸ್ತುಗಳನ್ನು ಅರ್ಥೈಸಿಕೊಂಡು ಸೂಕ್ತ ಉದಾಹರಣೆಗಳನ್ನು ನೀಡುವರು. | 1.ಪುರಾತನ ಗ್ರೀಸ್‌ನಲ್ಲಿ ಮ್ಯಾಗ್ನಸ್ ಎಂಬ ಹೆಸರಿನ ಕುರಿಕಾಯುವವ ವಾಸವಾಗಿದ್ದನೆಂದು......... ಎಂಬ ಕಥೆಯನ್ನು ವಿದ್ಯಾರ್ಥಿಗಳಿಗೆ ಹೇಳುತ್ತಾ ನೈಸರ್ಗಿಕ ಕಾಂತದ ಆವಿಷ್ಕಾರ ಹಾಗೂ ಕಾಂತದ ಅರ್ಥವನ್ನು ತಿಳಿಯಲು ಅನುಕೂಲಿಸುವರು.<br>2.ವಿದ್ಯಾರ್ಥಿಗಳಿಗೆ ವಿವಿಧ ಆಕಾರಗಳ ಕಾಂತಗಳನ್ನು ಒದಗಿಸಿ ಪ್ರಾಯೋಗಿಕ ಅನುಭವವನ್ನು ಪಡೆಯಲು ಸಹಕರಿಸುವುದು.ಪಠ್ಯಪುಸ್ತಕದಲ್ಲಿನ ಚಟುವಟಿಕೆ–1ನ್ನು ನಿರ್ವಹಿಸುವುದು.(ಅಭ್ಯಾಸ ಹಾಳೆ–01ನ್ನು ಬಳಸಿಕೊಳ್ಳುವುದು.)<br><br>3. ವಿದ್ಯಾರ್ಥಿಗಳು ಲಭ್ಯವಿರುವ ಲೋಹ ಹಾಗೂ ಅಲೋಹಗಳಿಂದಾದ ವಿವಿಧ ವಸ್ತುಗಳನ್ನು ಸಂಗ್ರಹಿಸಿ ತರಲು ತಿಳಿಸಿ,ಪಠ್ಯಪುಸ್ತಕದಲ್ಲಿ ನೀಡಿರುವ ಕೋಷ್ಟಕ 13.1ನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.<br><br>(ಅಭ್ಯಾಸ ಹಾಳೆ–02ನ್ನು ಬಳಸಿಕೊಳ್ಳುವುದು.) | 1.ಭೂಮಿಯಲ್ಲಿ ದೊರೆಯುವ ನೈಸರ್ಗಿಕ ಕಾಂತ ಯಾವುದು?<br><br>2. ಕಾಂತಗಳು ಎಂದರೇನು?<br><br>3. ವಿವಿಧ ಆಕಾರಗಳ ಕೃತಕ ಕಾಂತಗಳ ಚಿತ್ರಗಳನ್ನು ಬರೆಯಿರಿ.<br><br>4. ಕಾಂತೀಯ ವಸ್ತುಗಳು ಹಾಗೂ ಅಕಾಂತೀಯ ವಸ್ತುಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ.<br><br>5. ಕಾಂತಗಳನ್ನು ಬಳಸಿರುವ ವಿವಿಧ ಉಪಕರಣಗಳನ್ನು ಹೆಸರಿಸಿ. |

| | | | | |
|---|---|---|---|---|
| | <u>ಫೆಬ್ರವರಿ</u> ಎರಡನೇ ವಾರ | 3.ಕಾಂತದ ಧ್ರುವಗಳ ಪರಿಚಯದೊಂದಿಗೆ ದಿಕ್ಕುಗಳನ್ನು ಕಂಡುಹಿಡಿಯುವ ವಿಧಾನಗಳನ್ನು ಪ್ರಾಯೋಗಿಕವಾಗಿ ಅರ್ಥೈಸುವರು. | 4. ವಿದ್ಯಾರ್ಥಿಗಳನ್ನು ಶಾಲಾ ಆವರಣಕ್ಕೆ ಕರೆದುಕೊಂಡು ಹೋಗಿ ವಿವಿಧ ಕೃತಕ ಕಾಂತಗಳನ್ನು ಹಾಗೂ ಕಾಗದಗಳನ್ನು ನೀಡಿ, ಆ ಕಾಗದದಲ್ಲಿ ಕಾಂತವನ್ನು ಸುತ್ತಿ ಮರಳು ಮಿಶ್ರಿತ ಮಣ್ಣಿನಲ್ಲಿ ಕೆಲವು ನಿಮಿಷಗಳ ಕಾಲ ನಿಧಾನವಾಗಿ ಆಡಿಸಲು ತಿಳಿಸಿ,ಆ ಕಾಗದಕ್ಕೆ ಅಂಟಿಕೊಂಡಿರುವ ಕಬ್ಬಿಣದ ರಜಗಳನ್ನು ಗಮನಿಸಿ ನಂತರ ಕಬ್ಬಿಣದ ರಜಗಳ ಮಧ್ಯೆ ಕಾಂತವನ್ನು ಆಡಿಸಿ ಕಾಂತದ ಯಾವ ಭಾಗದಲ್ಲಿ ಕಬ್ಬಿಣದ ರಜಗಳು ಹೆಚ್ಚು ಆಕರ್ಷಿತವಾಗಿವೆ? ಎಂಬುದರ ಆಧಾರದ ಮೇಲೆ ಕಾಂತದ ಧ್ರುವಗಳನ್ನು ಪರಿಚಯಿಸುವರು.<br>ಪಠ್ಯಪುಸ್ತಕದಲ್ಲಿ ನೀಡಿರುವ ಚಟುವಟಿಕೆ(3)ನ್ನು ನಿರ್ವಹಿಸಿ ಕೋಷ್ಟಕ 13.2ನ್ನು ಭರ್ತಿಮಾಡುವ ಮೂಲಕ ಬೇರೆ ಬೇರೆ ಪ್ರದೇಶದ ಮಣ್ಣಿನಲ್ಲಿ ವಿವಿಧ ಪ್ರಮಾಣದಲ್ಲಿ ಕಬ್ಬಿಣದ ರಜಗಳ ಹಂಚಿಕೆಯನ್ನು ತಿಳಿಯುವರು.<br><br>5.ಚೈನಾದ ಹುಯಾಂಗ್ ಟಿ ಎಂಬ ದೊರೆಯ ಕಥೆಯನ್ನು ಹೇಳುವ ಮೂಲಕ ಕಾಂತದ ಸಹಾಯದಿಂದ ದೊರೆಯು ದಿಕ್ಕುಗಳನ್ನು ಗುರುತಿಸಲು ಹೇಗೆ ಶಕ್ತನಾಗಿದ್ದನು? ಎಂಬುದನ್ನು ಚಿತ್ರ 13.8ರ ಸಹಾಯದಿಂದ ವಿವರಿಸುವರು.<br>ಪಠ್ಯಪುಸ್ತಕದಲ್ಲಿ ನೀಡಿರುವ ಚಟುವಟಿಕೆ(5)ನ್ನು ನಿರ್ವಹಿಸುವ ಮೂಲಕ ಸ್ವತಂತ್ರವಾಗಿ ತೂಗಿಬಿಟ್ಟ ದಂಡಕಾಂತವು ಯಾವಾಗಲೂ ಉತ್ತರ–ದಕ್ಷಿಣ ದಿಕ್ಕಿನಲ್ಲಿಯೇ ನಿಲ್ಲುತ್ತದೆ ಎಂಬುದನ್ನು ಪ್ರಾತ್ಯಕ್ಷಿಕವಾಗಿ ಅರ್ಥೈಸುವರು.ಕಾಂತದ ಈ ವಿಶಿಷ್ಟ ಗುಣವನ್ನು ದಿಕ್ಸೂಚಿಗಳಲ್ಲಿ ಅನ್ವಯಿಸುವುದನ್ನು ತಿಳಿಯುವರು. | 6. ದಂಡಕಾಂತದಲ್ಲಿ ಕಾಂತದ ಆಕರ್ಷಣಾ ಗುಣ ಎಲ್ಲಿ ಹೆಚ್ಚಾಗಿರುತ್ತದೆ?<br><br>7.ಸ್ವತಂತ್ರವಾಗಿ ತೂಗುಬಿಟ್ಟ ದಂಡಕಾಂತವು ಉತ್ತರ–ದಕ್ಷಿಣವಾಗಿ ನಿಲ್ಲಲು ವೈಜ್ಞಾನಿಕ ಕಾರಣವೇನು? |

| | | | | |
|---|---|---|---|---|
| | | 4.ತಾತ್ಕಾಲಿಕ ಕೃತಕ ಕಾಂತ ತಯಾರಿಕೆ, ಕಾಂತೀಯ ಧ್ರುವಗಳ ಆಕರ್ಷಣಾ ಗುಣ ಮತ್ತು ಕಾಂತಗಳ ಕಾಂತೀಯ ಗುಣವನ್ನು ಸಂರಕ್ಷಿಸುವ ವಿಧಾನಗಳನ್ನು ಅರಿಯುವರು. | 6.ಶಿಕ್ಷಕರು ಚಿತ್ರ 13.11ರ ಸಹಾಯದಿಂದ ತಾತ್ಕಾಲಿಕ ಕೃತಕ ಕಾಂತ ತಯಾರಿಕಾ ವಿಧಾನವನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸುವರು.<br><br>7. ನೈಜ ಕಾಂತಗಳ ಸಹಾಯದಿಂದ ಧ್ರುವಗಳ ಆಕರ್ಷಣೆ ಮತ್ತು ವಿಕರ್ಷಣೆ ಗುಣವನ್ನು ಪ್ರಾತ್ಯಕ್ಷಿಕೆ ಮೂಲಕ ಅರ್ಥೈಸುವರು. ವಿವಿಧ ಕಾಂತಗಳ ಕಾಂತೀಯ ಗುಣಗಳನ್ನು ಚಿತ್ರ 13.15ಮತ್ತು 13.16ರ ಸಹಾಯದಿಂದ ನೈಜ ಕಾಂತಗಳನ್ನು ಬಳಸಿ ವಿವರಿಸುವರು.<br><br>TEACHOPIA appನಲ್ಲಿ “ಕಾಂತಗಳೊಂದಿಗೆ ಆಟ” ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಪಾಠ ಟಿಪ್ಪಣಿ,ಅಭ್ಯಾಸ ಹಾಳೆಗಳನ್ನು ಬಳಸಿಕೊಂಡು ಕಲಿಕೆಗೆ ಅನುಕೂಲಿಸುವುದು.<br><br>ಇ –ಸಂವೇದ ತರಗತಿಯ ವಿಡಿಯೋ ಲಿಂಕ್ ಅನ್ನು ಬಳಸಿಕೊಂಡು “ಕಾಂತಗಳೊಂದಿಗೆ ಆಟ” ಪಾಠವನ್ನು ವೀಕ್ಷಿಸಿ ಅದರಲ್ಲಿನ ಚಟುವಟಿಕೆಗಳನ್ನು ನಿರ್ವಹಿಸಲು ಸಹಕರಿಸೋಣ.<br>https://youtu.be/Z_uDNkl09Go<br>https://youtu.be/0VJTpMQe4Q<br><br>DIKSHA ದೀಕ್ಷಾ ಆಪ್‌ನಲ್ಲಿ “ಕಾಂತಗಳೊಂದಿಗೆ ಆಟ” ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಬಳಸಿಕೊಂಡು ಇನ್ನೂ ಹೆಚ್ಚಿನ ಕಲಿಕೆಗೆ ಅನುಕೂಲಿಸುವುದು. | 11.ಕಾಂತಗಳ ಕಾಂತತ್ವವನ್ನು ದೀರ್ಘ ಕಾಲದವರೆಗೆ ಸಂರಕ್ಷಿಸುವ ವಿಧಾನಗಳನ್ನು ಪಟ್ಟಿ ಮಾಡಿ.<br><br>1.ನೀರಿನ ವಿವಿಧ ಉಪಯೋಗಗಳನ್ನು ಗುಂಪಿನಲ್ಲಿ ಚರ್ಚಿಸಿ. |

| | | | | |
|---|---|---|---|---|
| | ಫೆಬ್ರವರಿ ಮೂರನೇ ವಾರ<br><br>ಅಧ್ಯಾಯ:14– ನೀರು | 1.ದೈನಂದಿನ ಜೀವನದಲ್ಲಿ ನಮಗೆ ಅಗತ್ಯವಿರುವ ನೀರಿನ ಪ್ರಮಾಣವನ್ನು ತಿಳಿಯುವರು. | 1.ವಿದ್ಯಾರ್ಥಿಗಳಿಗೆ ಒಂದು ದಿನದಲ್ಲಿ ವಿವಿಧ ಚಟುವಟಿಕೆಗಳಿಗೆ ಬಳಸುವ ನೀರಿನ ಪ್ರಮಾಣವನ್ನು(ಲೀಟರ್) ಪಟ್ಟಿಮಾಡಿ ಬರೆಯುವಂತೆ ಯೋಜನಾಕಾರ್ಯ ನೀಡುವುದು.ಈ ಯೋಜನಾಕರ್ಯಕ್ಕೆ ಪೂರಕವಾಗಿ ಗುಂಪಿನಲ್ಲಿ ಚರ್ಚಿಸಿ ಸ್ನೇಹಿತರು ಬಳಸುವ ನೀರಿನ ಪ್ರಮಾಣವನ್ನು ಹೋಲಿಕೆ ಮಾಡುವರು. | 2.ನೀರಿನ ವಿವಿಧ ಆಕರಗಳನ್ನು ಪಟ್ಟಿ ಮಾಡಿ.<br><br>3.ಭೂಮಿಯ ಎಷ್ಟು ಭಾಗ ನೀರಿನಿಂದ ಆವೃತವಾಗಿದೆ? |
| | | 2. ನೀರಿನ ವಿವಿಧ ಆಕರಗಳ ಬಗ್ಗೆ ತಿಳಿದು, ಭೂಮಿಯ ಮೇಲಿನ ನೀರಿನ ಹಂಚಿಕೆಯ ಪ್ರಮಾಣವನ್ನು ಅರ್ಥೈಸಿಕೊಳ್ಳುವರು. | 2.ನಿತ್ಯ ಜೀವನದಲ್ಲಿ ನೀವು ಬಳಸುವ ನೀರನ್ನು ಯಾವ ಯಾವ ಮೂಲಗಳಿಂದ ಪಡೆಯುತ್ತೀರಿ ಎಂಬುದನ್ನು ಪಟ್ಟಿಮಾಡಲು ಸೂಚಿಸಿ,ಇನ್ನಿತರೆ ನೀರಿನ ಆಕರಗಳನ್ನು ತಿಳಿಸುವರು.<br>ಭೂಮಿಯ ಮೇಲಿನ ನೀರಿನ ಹಂಚಿಕೆಯ ಪ್ರಮಾಣವನ್ನು ನಕ್ಷೆಯ ಸಹಾಯದಿಂದ ಅರ್ಥೈಸುವುದು. | 4. ಜಲಚಕ್ರವನ್ನು ವಿವರಿಸಿ. |
| | ಫೆಬ್ರವರಿ ನಾಲ್ಕನೇ ವಾರ | 3.ಜಲಚಕ್ರದ ಅರ್ಥ ತಿಳಿದು, ಜಲಚಕ್ರಕ್ಕೆ ಕಾರಣವಾಗುವ ಪ್ರಮುಖ ಅಂಶಗಳನ್ನು ತಿಳಿಯುವರು. | 3.ವಿದ್ಯಾರ್ಥಿಗಳಿಗೆ,<br>* ತಮ್ಮ ಸುತ್ತಲಿನ ಹಳ್ಳ, ಕೊಳ್ಳ,ಕೆರೆಗಳಲ್ಲಿನ ನೀರು ಖಾಲಿಯಾಗಲು ಕಾರಣವೇನು?<br>* ಒದ್ದೆ ಬಟ್ಟೆಯಲ್ಲಿನ ತೇವಾಂಶ ಇಲ್ಲದಂತಾಗಲು ಕಾರಣವೇನು?<br>ಇಂತಹ ವಿಮರ್ಶಾತ್ಮಕ ಚಿಂತನಾ ಪ್ರಶ್ನೆಗಳನ್ನು ಕೇಳಿ,ಚರ್ಚಿಸಿ ವೈಜ್ಞಾನಿಕ ಕಾರಣಗಳೊಂದಿಗೆ ಜಲಚಕ್ರವನ್ನು ಅರ್ಥೈಸುವರು.<br>(ಅಭ್ಯಾಸ ಹಾಳೆ–03ನ್ನು ಬಳಸಿಕೊಳ್ಳುವುದು.)<br><br>ಪಠ್ಯಪುಸ್ತಕದಲ್ಲಿ ನೀಡಿರುವ ಚಟುವಟಿಕೆ(3)ನ್ನು ನಿರ್ವಹಿಸುವ ಮೂಲಕ ಮೋಡಗಳು ಉಂಟಾಗುವ ವಿಧಾನವನ್ನು ಪ್ರತ್ಯಕ್ಷಿಕೆಯೊಂದಿಗೆ ತಿಳಿಸುವದು. | 5. ಮೋಡಗಳು ಹೇಗೆ ಉಂಟಾಗುತ್ತವೆ?<br><br>6.ಬರಗಾಲ ಯಾವಾಗ ಉಂಟಾಗುತ್ತದೆ? |

| | | | | |
|---|---|---|---|---|
| | | 4.ಅತಿವೃಷ್ಟಿ ಹಾಗೂ ಅನಾವೃಷ್ಟಿಗಳ ಪರಿಣಾಮಗಳನ್ನು ಅರ್ಥೈಸಿಕೊಂಡು ಜಲಸಂರಕ್ಷಣೆಯ ಮಹತ್ವವನ್ನು ಅರಿಯುವರು. | (ಅಭ್ಯಾಸ ಹಾಳೆ–04ನ್ನು ಬಳಸಿಕೊಳ್ಳುವುದು.)<br><br>4. ವಿದ್ಯಾರ್ಥಿಗಳಿಗೆ ವಿವಿಧ ದಿನ ಪತ್ರಿಕೆಗಳಲ್ಲಿ ಕಂಡುಬರುವ ಅತಿವೃಷ್ಟಿ ಹಾಗೂ ಅನಾವೃಷ್ಟಿಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಅವುಗಳ ಪರಿಣಾಮಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸುವುದು.<br>ನೀರಿನ ವಿವಿಧ ಸಂರಕ್ಷಣಾ ವಿಧಾನಗಳ ಬಗ್ಗೆ ಗುಂಪಿನಲ್ಲಿ ಚರ್ಚಿಸಲು ಅನುಕೂಲಿಸಿ. ಮಳೆನೀರು ಕೊಯ್ಲಿನ ಕಾರ್ಯ ವಿಧಾನದ ಬಗ್ಗೆ ಅರ್ಥೈಸುವುದು.<br>(ಅಭ್ಯಾಸ ಹಾಳೆ–05ನ್ನು ಬಳಸಿಕೊಳ್ಳುವುದು.)<br><br>TEACHOPIA appನಲ್ಲಿ "ನೀರು " ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಪಾಠ ಟಿಪ್ಪಣಿ,ಅಭ್ಯಾಸ ಹಾಳೆಗಳನ್ನು ಬಳಸಿಕೊಂಡು ಕಲಿಕೆಗೆ ಅನುಕೂಲಿಸುವುದು.<br>ಇ –ಸಂವೇದ ತರಗತಿಯ ವಿಡಿಯೋ ಲಿಂಕ್ ಅನ್ನು ಬಳಸಿಕೊಂಡು "ನೀರು" ಪಾಠವನ್ನು ವೀಕ್ಷಿಸಿ ಅದರಲ್ಲಿನ ಚಟುವಟಿಕೆಗಳನ್ನು ನಿರ್ವಹಿಸಲು ಸಹಕರಿಸೋಣ.<br>https://youtu.be/0AhdlZyJ9w0<br><br>https://youtu.be/xr1ERBOZRIQ<br><br>DIKSHA ದೀಕ್ಷಾ ಆಪ್‌ನಲ್ಲಿ "ನೀರು" ಪಠ್ಯಾಂಶಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಬಳಸಿಕೊಂಡು ಇನ್ನೂ ಹೆಚ್ಚಿನ ಕಲಿಕೆಗೆ ಅನುಕೂಲಿಸುವುದು. | 7.ಪ್ರವಾಹದಿಂದಾಗುವ ಪರಿಣಾಮಗಳನ್ನು ಚರ್ಚಿಸಿ.<br><br>8. ಮಳೆನೀರು ಕೊಯ್ಲಿನ ಕಾರ್ಯ ವಿಧಾನವನ್ನು ವಿವರಿಸಿ.<br><br>9. ನೀರಿನ ಸಂರಕ್ಷಣಾ ವಿಧಾನಗಳನ್ನು ಪಟ್ಟಿ ಮಾಡಿ. |

# ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022

**ತರಗತಿ:– 6ನೇ** **ವಿಷಯ:– ವಿಜ್ಞಾನ**

## ಅಭ್ಯಾಸ ಹಾಳೆ–01

**ಕೆಳಗಿನ ಕಾಂತಗಳ ಚಿತ್ರಗಳನ್ನು ಗಮನಿಸಿ,ಅವುಗಳ ಹೆಸರುಗಳನ್ನು ಆವರಣದಿಂದ ಆಯ್ಕೆ ಮಾಡಿ ಖಾಲಿ ಜಾಗದಲ್ಲಿ ಬರೆಯಿರಿ.**

**(ಸೂಜಿ ಕಾಂತ, ಕುದುರೆಲಾಳಾಕಾರದ ಕಾಂತ,ದಂಡಕಾಂತ, ಬಿಲ್ಲೆಕಾಂತ, ಗೋಳಾಕಾರದ ತುದಿಯ ಕಾಂತ)**











## ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–02**

**ಈ ಕೆಳಗಿನ ಚಿತ್ರಗಳನ್ನು ಗಮನಿಸಿ,ಇವುಗಳಲ್ಲಿ ಕಾಂತವನ್ನು ಬಳಕೆ ಮಾಡಿರುವ ವಸ್ತು/ಉಪಕರಣಗಳಿಗೆ ವೃತ್ತ ಹಾಕಿ.**












## <u>ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022</u>

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–03**

**ಈ ಕೆಳಗಿನ ಜಲಚಕ್ರದ ಚಿತ್ರವನ್ನು ಗಮನಿಸಿ. ಖಾಲಿ ಜಾಗಗಳನ್ನು ಭರ್ತಿ ಮಾಡಿ.**



## ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022

ತರಗತಿ:– 6ನೇ ವಿಷಯ:– ವಿಜ್ಞಾನ

### ಅಭ್ಯಾಸ ಹಾಳೆ–04

ಈ ಕೆಳಗೆ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದದ್ದನ್ನು ಆವರಣದಿಂದ ಆಯ್ಕೆಮಾಡಿ ಬರೆಯಿರಿ.

( ಸಾಂದ್ರೀಕರಣ, ಆವೀಕರಣ, ಭಾಷ್ಪೀಭವನ, ವಿಸರಣೆ, ಅಭಿಸರಣೆ )

- ಕೆರೆಯಿಂದ ನೀರು ಗಾಳಿಗೆ ಸೇರುವುದು.
- ಸಸ್ಯಗಳಿಂದ ನೀರು ಗಾಳಿಗೆ ಸೇರುವುದು.
- ಸಸ್ಯಗಳ ಎಲೆಗಳ ಮೇಲಿನ ಮಂಜು(ಇಬ್ಬನಿ)
- ಒದ್ದೆಯಾಗಿರುವ ಬಟ್ಟೆ ಒಣಗುವುದು.
- ನೀರು ಮಂಜುಗಡ್ಡೆಯಾಗುವುದು.

## ಪರ್ಯಾಯ ಶೈಕ್ಷಣಿಕ ಯೋಜನೆ –ಫೆಬ್ರವರಿ 2022

**ತರಗತಿ:– 6ನೇ** **ವಿಷಯ:– ವಿಜ್ಞಾನ**

**ಅಭ್ಯಾಸ ಹಾಳೆ–05**

**"ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ" ಈ ಕುರಿತು ಪ್ರಬಂಧ ಬರೆಯಿರಿ.**